ಕರ್ನಾಟಕ ಸರ್ಕಾರ

(ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ದಾಂಡೇಲಿ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ. 355-2017

............................ ವಿರುದ್ಧ .............................

PW 01
CW 01

| | | |
|---|---|---|
| ಸಾಕ್ಷಿ ಹೆಸರು | : | ಮುಗುಟಸಾಬ ಇಸ್ಮಾಯಿಲ್‌ಸಾಬ ತಿಗರೋಳ್ಳಿ |
| ತಂದೆಯ ಹೆಸರು | : | ಇಸ್ಮಾಯಿಲ್‌ಸಾಬ ತಿಗರೋಳ್ಳಿ |
| ವಯಸ್ಸು | : | 44 ವರ್ಷ |
| ಉದ್ಯೋಗ | : | ಗಾರೇ ಕೆಲಸ |
| ವಾಸಸ್ಥಳ | : | ಬರ್ಚಿ ರಸ್ತೆ ದಾಂಡೇಲಿ |

ದಿನಾಂಕಃ 04-06-2024 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣ ವಚನ ಬೋಧಿಸಲಾಯಿತು.

## ಮುಖ್ಯ ವಿಚಾರಣೆ : ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಆರೋಪಿಯ ಪರಿಚಯ ಇಲ್ಲಾ. ದಿಃ 07-06-20217 ರಂದು ರಾತ್ರಿ 8-00 ಗಂಟೆಯ ಒಳಗೆ ದಾಂಡೇಲಿಯ ಗಣಪತಿ ದೇವಸ್ಥಾನದ ಫರ್ನಿಚರ ಅಂಗಡಿಯ ಎದುರುಗಡೆ ನಿಂತು ಪೋನ್ ನಲ್ಲಿ ಮಾತಾನಾಡುತ್ತಾ ಇರುವಾಗ ಆರೋಪಿಯು ವೋಲ್ಸ ತುಂಬಿದ ಲಾರಿ ಸಂಃ ಕೆಎ-01-ಎ-0899 ನೇದ್ದರಲ್ಲಿ ಬರ್ಚಿ ಕಡೆಯಿಂದ ದಾಂಡೇಲಿ ಕಡೆಗೆ ವೇಗವಾಗಿ ಚಾಲಾಯಿಸುತ್ತಿದ್ದರು. ಆಗ ಅಬ್ದುಲಘನಿ ಮುಜಾವರ ಎಂಬುವ ವ್ಯಕ್ತಿ ಮೋಟಾರ ಸೈಕಲ್‌ನಲ್ಲಿ ದಾಂಡೇಲಿಯಿಂದ ಬರ್ಚಿ ಕಡೆಗೆ ಹೋಗುತ್ತಿದ್ದರು. ಆಗ ಎದುರು ಲಾರಿಯ ಹಿಂದಿನ ಬಲಬದಿಯ ಟಾಯರ್ ಮೃತ ಅಬ್ದುಲಘನಿ ಮುಜಾವರವರ ಮೇಲೆ ಹಾದು ಹೋಗಿದ್ದರಿಂದ, ಆತನ ಕೈ ಮೇಲೆ ಹಾಗೂ ತಲೆಯ ಮೇಲೆ ವಾಹನ ಹತ್ತಿದ್ದರಿಂದ ಸದ್ರಿ ವ್ಯಕ್ತಿಯ ತಲೆ ಚಪ್ಪಟೆಯಾಗಿರುತ್ತದೆ. ಸದ್ರಿ ವ್ಯಕ್ತಿ ಸ್ಥಳದಲ್ಲಿ ಮೃತ ಪಟ್ಟಿರುತ್ತಾರೆ.

ಅವರನ್ನು ನಾನು ಹಾಗೂ ಸ್ಥಳದಲ್ಲಿ ನೇರದಿದ್ದ ವ್ಯಕ್ತಿಗಳು ದಾಂಡೇಲಿ ಸರಕಾರಿ ಆಸ್ಪತ್ರೆಗೆ ಅಂಬ್ಯುಲೇನ್ಸನಲ್ಲಿ ಕಳುಹಿಸಿಕೊಟ್ಟಿರುತ್ತೇವೆ. ನಾನು ಸಹ ಆಸ್ಪತ್ರೆಗೆ ಹೋಗಿರುತ್ತೇನೆ.

ನಂತರ ಠಾಣೆಗೆ ಹೋಗಿ ಸದ್ರಿ ವಿಷಯಕ್ಕೆ ಸಂಬಂಧಿಸಿದಂತೆ ದೂರನ್ನು ನೀಡಿರುತ್ತೇನೆ. ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾ ನಿಪಿ 1 ಎಂದು ಗುರುತಿಸಲಾಯಿತು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ದೂರನ್ನು ಪೊಲೀಸರು ಬರೆದಿರುತ್ತಾರೆ. ನಂತರ ಮರುದಿನ ಪೊಲೀಸರು ನಾನು ತೋರಿಸಿದ ಘಟನಾ ಸ್ಥಳದ ಚಾಸಾ 2 ಮತ್ತು ಚಾಸಾ 3 ರವರ ಸಮಕ್ಷಮ ಬೆಳಿಗ್ಗೆ 10-00 ರಿಂದ 11-00 ರವರಗೆ ಪಂಚನಾಮೆಯನ್ನು ತಯಾರಿಸಿರುತ್ತಾರೆ. ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾ ನಿಪಿ 2 ಎಂದು ಗುರುತಿಸಲಾಯಿತು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ಪಂಚನಾಮೆಯ ಕಾಲಕ್ಕೆ ತೆಗೆದ 2 ಪೋಟೋಗಳನ್ನು ನೋಡಿ ಗುರುತಿಸಿದ್ದು, ಅದರಲ್ಲಿ ತಾನು ಇರುವುದನ್ನು ನೋಡಿ ಗುರುತಿಸಿದ್ದು, ಅವುಗಳನ್ನು ನಿಪಿ 3 ಮತ್ತು 4 ಎಂದು ಗುರುತಿಸಲಾಯಿತು. ಸರಕಾರಿ ಆಸ್ಪತ್ರೆಯಲ್ಲಿ ಶವ ಪಂಚನಾಮೆಯ ಕಾಲಕ್ಕೆ ತೆಗೆದ ಪೋಟೋದಲ್ಲಿ ನಾನು ಇರುವುದನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 5 ಎಂದು ಗುರುತಿಸಲಾಯಿತು. ಈ ದಿನ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತೇನೆ.

( ಈ ಹಂತದಲ್ಲಿ ಎ.ಪಿ.ಪಿ. ರವರ ವಿನಂತಿ ಮೇರೆಗೆ ಸಾಕ್ಷಿಯನ್ನು ಭಾಗಾಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

**ಪಾಟೀ ಸವಾಲು : ಎ.ಪಿ.ಪಿ. ರವರಿಂದ**

ಮೃತ ಅಬ್ದುಲಘನಿ ಮುಜಾಪರ ರವರು ಚಾಲನೆ ಮಾಡುತ್ತಿದ್ದ ಮೋಟಾರ ಸೈಕಲ್ ಸಂಃ ಕೆಎ-31-ಕ್ಯೂ- 9273 ಆಗಿರುತ್ತದೆ ಎಂದರೆ ಸರಿ. ಪಂಚನಾಮೆಯ ಕಾಲಕ್ಕೆ ಕಚ್ಚಾ ನಕಾಶೆಯನ್ನು

ತೆಗೆದಿರುತ್ತಾರೆ ಎಂದರೆ ಸರಿ. ಸದ್ರಿ ಕಚ್ಚಾ ನಕಾಶೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾ ನಿಪಿ 6 ಎಂದು ಗುರುತಿಸಲಾಯಿತು, ಅದರಲ್ಲಿರುವ ನನ್ನ ಸಹಿಯನ್ನು ನಿಪಿ 6 ಎ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀ.ಆರ್.ಐ.ಎಚ್ ವಕೀಲರಿಂದ.**

ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಯಿತು)**

ಓ.ಹೇ.ಕೇ. ಸರಿ ಅದೆ.

**ಸಹಿ ಇದೆ.**

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ., ದಾಂಡೇಲಿ.